## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**8325/2022**

ಸಿ.ಡಬ್ಲ್ಯೂ –5 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಭೀಮಾಶಂಕರ |
| ತಂದೆ | ಃ | ಅಂಬಾರಾಯ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ04.12.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 4, 6, 8 ರಿಂದ 12 ರವರ ಪರಿಚಯ ಇರುತ್ತದೆ. ಚಾಸಾ-7 ರವರ ಪರಿಚಯ ಇರುವುದಿಲ್ಲ. ಆರ್.ಟಿ.ಓ. ಅಧಿಕಾರಿ ಹಾಗೂ ಪೋಲಿಸರು ಬಂದು ಪಂಚನಾಮೆ ಮಾಡುವಾಗ ನಾನು ಸಹಿ ಮಾಡಿರುತ್ತೇನೆ. ಅಪಘಾತ ಆದಾಗ ಪೋಲಿಸರು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು. ಆಗ ನಾನು ಹೋಗಿದ್ದೇನು. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಿ ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.29.05.2022 ರಂದು ಬೆಳಗ್ಗೆ 11.00 ರಿಂದ 12.00 ಗಂಟೆಯವರೆಗೆ ನನ್ನ ಸಮಕ್ಷಮ ಗುನ್ನೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಗುನ್ನೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಒಂದು ಕ್ರೂಸರ ಕೆಎ-48/ಎಂ-0521 ಹಾಗೂ ಒಂದು ಫ್ಯಾಶನ ಪ್ರೊ ಕೆಎ-32/ಇಸಿ-4466 ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ-4 ರವರು ಸೇರಿ ಪಂಚನಾಮೆಗೆ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ.**

ಚಾಸಾ-1 ರವರು ನನ್ನ ಬೀಗರು ಎಂದರೆ ದೂರದ ಸಂಬಂಧಿ ಎಂದು ಹೇಳುತ್ತಾರೆ. ನಾನು ನಿಪಿ-2 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಆರ್.ಟಿ.ಓ. ಅಧಿಕಾರಿ ಯೊಂದಿಗೆ ಆಳಂದ ಸಿಪಿಐ ಹಾಗೂ ನರೋಣಾ ಠಾಣೆಯ ಸಿಬ್ಬಂದಿಗಳು ಇದ್ದರು. ಅಪಘಾತವಾದ ಸ್ಥಳ ಪರಿಶೀಲನೆ ಮಾಡಲು ಬಂದಿದ್ದೇವೆ ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾಮೆ ಮಾಡಲು ನನ್ನನ್ನು ಯಾರು ಕರೆಯಿಸಿರಲಿಲ್ಲ. ನಾನು ಘಟನಾ ಸ್ಥಳ ನೋಡಲು ಹೋದಾಗ ಚಾಸಾ-4 ರವರು ನನ್ನೊಂದಿಗೆ ಬಂದಿರಲಿಲ್ಲ, ಅವರು ಪ್ರತ್ಯೇಕವಾಗಿ ಬಂದಿದ್ದರು. ಚಾಸಾ-4 ರವರು ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಜಪ್ತಿಪಡಿಸಿಕೊಂಡ ಕ್ರೂಸರ ಸಂಖ್ಯೆ ಕೆಎ-48/ಎಂ-0521 ಇರುತ್ತದೆ. ಘಟನಾ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾರಿಯ ಮಧ್ಯದಲ್ಲಿ ಒಂದು ಗುಂಡಿ ಇದೆ ಎಂದು ಹೇಳುತ್ತಾರೆ. ಆಳಂದದಿಂದ ಬೋಧನ ರಸ್ತೆ ಡಾಂಬರ ರಸ್ತೆ ಇದ್ದರೂ ಕೆಲವು ಕಡೆ ಗುಂಡಿಗಳು ಇವೆ ಎಂದರೆ ಸರಿ. ಗುಂಡಿಗಳು ಇರುವ ಕಾರಣ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ. ಪಂಚನಾಮೆ ಮಾಡುವಾಗ ಪೊಲಿಸರು ನನ್ನ ಸಮಕ್ಷಮ ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ನಾನು ಚಾಸಾ-4 ಹಾಗೂ ಪೋಲಿಸರು ನಿಂತು ಭಾವಚಿತ್ರವನ್ನು ತೆಗೆದಿರುವುದಿಲ್ಲ. ಘಟನಾ ಸ್ಥಳದ ತಿರುವಿನ ಹತ್ತಿರ ಪೂಲ(ಸೇತುವೆ) ಇದೆ ಎಂದರೆ ಸರಿ. ತಿರುವು ಹಾಗೂ ಪೂಲ ಇರುವ ಕಾರಣ ಬೋದನ ಕಡೆಯಿಂದ ಹೋಗುವ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಘಟನಾ ಸ್ಥಳ ಉತ್ತರ ದಿಕ್ಕಿಗೆ ಪೂಲನಿಂದ 200-300 ಮೀಟರ ಅಂತರದಲ್ಲಿ ಇದೆ. ಘಟನಾ ಸ್ಥಳ ರಸ್ತೆಯ ಮೇಲೆ ಪಶ್ಚಿಮ ದಿಕ್ಕಿಗೆ ಇದೆ. ಘಟನಾ ಸ್ಥಳದಲ್ಲಿ ಹಲವು ಗುಂಡಿಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ ಒಂದು ಗುಂಡಿ ಇದೆ ಎಂದು ಹೇಳುತ್ತಾರೆ. ದಿ.29.05.2022 ರಂದು ಬೆಳಗ್ಗೆ 11.00 ರಿಂದ 12.00 ಗಂಟೆಯವರೆಗೆ ನನ್ನ ಸಮಕ್ಷಮ ಗುನ್ಹೆ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವಾಗ 15-20 ಜನ ನೆರದಿದ್ದರು. ಇವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ.

ಆರ್.ಟಿ.ಓ. ಅಧಿಕಾರಿ ಹಾಗೂ ಪೋಲಿಸರು ಬಂದು ಪಂಚನಾಮೆ ಮಾಡುವಾಗ ನಾನು ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದಾಗ ಪೋಲಿಸರು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ಹೋಗಿದ್ದೇನು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಒಂದು ಕ್ರೂಸರ ಕೆಎ-48/ಎಂ-0521 ಹಾಗೂ ಒಂದು ಫ್ಯಾಶನ ಪ್ರೊ ಕೆಎ-32/ಇಸಿ-4466 ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-4 ರವರು ಸೇರಿ ಪಂಚನಾಮೆಗೆ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.